ಸಚಿವರು):–

ಎ. ಹೌದು.

ಆ.ಹೌದು.

ಇ. ಈ ಮುಕ್ತಿ ಮಂದಿರ ಧರ್ಮ ಕ್ಷೇತ್ರವು ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ 'ಬಿ' ಗುಂಪಿನಡಿ ಬರುವುದು. ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವಂತೆ ಖಾಸಗಿ ಉದ್ಯಮಿಗಳನ್ನು ಉತ್ತೇಜಿಸುವುದೇ ಸರ್ಕಾರದ ನೀತಿಯಾಗಿದೆ. ಇಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ಬಂಡವಾಳ ಹೂಡಿಕೆ ಮೇಲೆ ಶೇಕಡ 20 ಸಬ್ಸಿಡಿ, ಇತರ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗುವುದು.

ಕುಂದಗೋಳ್ ತಾಲ್ಲೂಕು ಶಿಶುನಾಳ ಗ್ರಾಮವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ

1259 (1623): ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ. ಸಂತ ಶಿಶುನಾಳ ಷರೀಫರ ಜನ್ಮ ಸ್ಥಳವಾದ ಶಿಶುನಾಳ ಗ್ರಾಮಕ್ಕೆ ಬರುವ ಪ್ರವಾಸಿಗರಿಗೆ ಹಾಗೂ ಭಕ್ತಾದಿಗಳಿಗೆ ಇಲ್ಲಿ ಯಾವುದೇ ಸೌಲಭ್ಯ ಮತ್ತು ಸೌಕರ್ಯ ಇಲ್ಲದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ. ಹಾಗಿದ್ದಲ್ಲಿ, ಆ ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸುವ ಯೋಜನೆ ಸರ್ಕಾರಕ್ಕೆ ಇದೆಯೇ;

ಇ. ಇದ್ದಲ್ಲಿ, ಯಾವಾಗ ಮಾಡುವಿರಿ, ಇಲ್ಲದಿದ್ದರೆ ಕಾರಣವೇನು ?

ಶ್ರೀ ಪೆರಿಕಲ್ ಏಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಎ. ಹೌದು.

ಆ, ಇ. ಶಿಶುನಾಳ ಗ್ರಾಮ ಕರ್ನಾಟಕ ಪ್ರವಾಸೋದ್ಯಮ ನೀತಿಯಲ್ಲಿ 'ಬಿ' ಗುಂಪಿನಡಿ ಬರುತ್ತದೆ. ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಯೋಜನೆಗಳನ್ನು ಕೈಗೊಳ್ಳುವಂತೆ ಖಾಸಗಿ ಉದ್ಯಮಿಗಳನ್ನು ಉತ್ತೇಜಿಸುವುದು ಸರ್ಕಾರದ ನೀತಿಯಾಗಿದೆ. ಇಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳುವ ಖಾಸಗಿ ಉದ್ಯಮಿಗಳಿಗೆ ಬಂಡವಾಳ ಹೂಡಿಕೆ ಮೇಲೆ ಶೇಕಡ 20 ಸಬ್ಸಿಡಿ ಹಾಗೂ ಇತರ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗುವುದು.

ಕಲಘಟಗಿಯಲ್ಲಿ ಕ್ರೀಡಾಂಗಣ ಮಂಜೂರಾತಿ

1260 (1624): ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ):–

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ. ಕಲಘಟಗಿ ಪಟ್ಟಣದಲ್ಲಿ ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ಆಟವಾಡಲು ಒಂದು ಕ್ರೀಡಾಂಗಣ

ಇಲ್ಲದಿದ್ದು ಇದರಿಂದ ತೊಂದರೆಯಾಗುತ್ತಿರುವ ಸಂಗತಿ ಸರ್ಕಾರದವರ ಗಮನಕ್ಕೆ ಬಂದಿದೆಯೆ;

ಆ. ಹಾಗಿದ್ದಲ್ಲಿ ಇಲ್ಲಿ ಕ್ರೀಡಾಂಗಣ ನಿರ್ಮಿಸುವ ಯೋಜನೆ ಇದೆಯೆ;

ಇ. ಇದ್ದಲ್ಲಿ ಯಾವಾಗ ಆರಂಭಿಸುವಿರಿ ಮತ್ತು ಎಂದು ಪೂರ್ಣಗೊಳಿಸುವಿರಿ ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):–

ಅ. ಹೌದು.

ಆ. ಇದೆ.

ಇ. ಕ್ರೀಡಾಂಗಣ ನಿರ್ಮಾಣಕ್ಕೆ ಸೂಕ್ತವಾದ ನಿವೇಶನವು ಲಭ್ಯವಾಗಿ ಇಲಾಖೆಗೆ ವರ್ಗಾಯಿಸಿದ ಕೂಡಲೇ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗುವುದು.

ಚಲನಚಿತ್ರೋದ್ಯಮ ಅಭಿವೃದ್ಧಿಗೆ ವಿಶೇಷ ಯೋಜನೆ

1261 (1151): ಶ್ರೀ ಗುರುಪಾದಪ್ಪ ನಾಗ್ಮಾರಪಳ್ಳಿ (ಬೀದರ್):–

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಕರ್ನಾಟಕದಲ್ಲಿ ಕನ್ನಡ ಚಲನಚಿತ್ರೋದ್ಯಮದ ಅಭಿವೃದ್ಧಿಗಾಗಿ ಸರ್ಕಾರ ವಿಶೇಷ ಯೋಜನೆಯನ್ನೇನಾದರೂ ರೂಪಿಸಿದೆಯೇ ? (ವಿವರಗಳನ್ನು ನೀಡುವುದು);

ಆ. ಸರ್ಕಾರವು ಹಮ್ಮಿಕೊಂಡಿರುವ 100 ದಿನಗಳ ಕಾರ್ಯಕ್ರಮಗಳಲ್ಲಿ ಕನ್ನಡ ಚಿತ್ರೋದ್ಯಮಕ್ಕೆ ಯಾವ ರೀತಿ ನೆರವಾಗುವುದು;

ಇ. ಪಕ್ಕದ ರಾಜ್ಯಗಳಲ್ಲಿ ಕನ್ನಡ ಚಿತ್ರ ಪ್ರದರ್ಶನಕ್ಕೆ ಮಾನ್ಯತೆ ದೊರೆಯುತ್ತಿಲ್ಲವಾದ ಕಾರಣ ರಾಜ್ಯದಲ್ಲಿಯೂ ಇತರ ಭಾಷಾ ಚಲನಚಿತ್ರ ಪ್ರದರ್ಶನಕ್ಕೆ ಕಡಿವಾಣ ಹಾಕುವುದರಿಂದ ಕನ್ನಡ ಚಿತ್ರೋದ್ಯಮ ಬೆಳೆಯಲು ನೆರವಾಗುವುದಿಲ್ಲವೇ;

ಈ. ಕನ್ನಡ ಚಲನಚಿತ್ರ ನಿರ್ಮಾಪಕರಿಗೆ ಸರ್ಕಾರವು ಸಬ್ಸಿಡಿ ಹಣವನ್ನು ನೀಡುವಲ್ಲಿ ತಡಮಾಡುತ್ತಿರುವುದೂ ಸಹ ಚಿತ್ರೋದ್ಯಮ ಬೆಳೆಯಲು ತೊಂದರೆಯಾಗುತ್ತಿದೆಯೇ ?

ಉ. ಕಳೆದ ವರ್ಷ ತಯಾರಿಸಲಾದ ಕನ್ನಡ ಚಲನಚಿತ್ರಗಳು ಯಾವುವು ? ಇವುಗಳಲ್ಲಿ ರೀಮೇಕ್ ಆದ ಚಲನಚಿತ್ರಗಳು ಯಾವುವು;

ಊ. ಕಳೆದ ವರ್ಷ ತಯಾರಿಸಲಾದ ಸಬ್ಸಿಡಿ ನೀಡಲಾಗಿರುವ ಚಲನಚಿತ್ರಗಳೆಷ್ಟು ? ಸಬ್ಸಿಡಿ ಬಾಕಿ ಇರುವ ಚಲನಚಿತ್ರಗಳ ಸಂಖ್ಯೆ ಎಷ್ಟು;

ಋ. ರೀಮೇಕ್ ಕನ್ನಡ ಚಿತ್ರಗಳಿಗೆ ಸಬ್ಸಿಡಿಯನ್ನು ನಿಲ್ಲಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆಯೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ. ಹೌದು. ಸಹಾಯಧನ ಯೋಜನೆ, ಶೇಕಡಾ 50 ರಷ್ಟು ಮನರಂಜನಾ ತೆರಿಗೆ ವಿನಾಯಿತಿ, ಪ್ರಶಸ್ತಿಗಳು, ಚಿತ್ರೀಕರಣ ಶುಲ್ಕ ರಿಯಾಯ್ತಿ ಇವೆಲ್ಲವುಗಳನ್ನು ಜಾರಿಗೆ ತರಲಾಗಿದೆ.